ಕರ್ನಾಟಕ ಸರ್ಕಾರ

**(ವಾಣಿಜ್ಯ ತೆರಿಗೆ ಇಲಾಖೆ)**

ಸಂಖ್ಯೆ: ಸಿಬ್ಬಂದಿ–1/ಜಿಪಿಸಿಆರ್–09/2019–20.

ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿ,
ವಾಣಿಜ್ಯ ತೆರಿಗೆ ಕಾರ್ಯಾಲಯ, ಗಾಂಧಿನಗರ,
ಬೆಂಗಳೂರು, ದಿನಾಂಕ 02.08.2019

**ವಾಣಿಜ್ಯ ತೆರಿಗೆಗಳ ಆಯುಕ್ತರ ಸುತ್ತೋಲೆ ಸಂಖ್ಯೆ. 03 /2019–20**

ವಿಷಯ : ಇಲಾಖೆಯ ಪದನಾಮಗಳನ್ನು ತಪ್ಪಾಗಿ ಉಪಯೋಗಿಸುತ್ತಿರುವ ಬಗ್ಗೆ ಹಾಗೂ ಕಛೇರಿ / ಹುದ್ದೆಗಳ ಪದನಾಮಗಳ ಮೊಹರುಗಳನ್ನು ತಪ್ಪಾಗಿ ಉಪಯೋಗಿಸುತ್ತಿರುವ ಬಗ್ಗೆ.

ಉಲ್ಲೇಖ : ಈ ಕಛೇರಿಯ ಆದೇಶ ಸಂಖ್ಯೆ : ವಾತೆಅಆ(ಗು&ಸ)/ಜೆಡಿಎನ್‌ನೊಂದಣಿ/ ಸಿಆರ್–15/2017–18, ದಿನಾಂಕ : 29.06.2017.

***

ಇಲಾಖೆಯಲ್ಲಿ ಕೆಲವು ಕಛೇರಿಗಳಲ್ಲಿ ಕೆಲವು ಅಧಿಕಾರಿಗಳು ತಮ್ಮ ಪದನಾಮಗಳನ್ನು ಹಾಗೂ ಕಛೇರಿಯ ಪದನಾಮಗಳನ್ನು ತಪ್ಪಾಗಿ ಉಪಯೋಗಿಸುತ್ತಿರುವುದು ಈ ಕಛೇರಿಯ ಗಮನಕ್ಕೆ ಬಂದಿದ್ದು, ಇವುಗಳನ್ನು ಸರಿಪಡಿಸಿಕೊಳ್ಳಲು ಹಾಗೂ ಇಲಾಖೆಯ ಎಲ್ಲಾ ಅಧಿಕಾರಿಗಳೂ ಪದನಾಮ, ಕಛೇರಿಯ ಹೆಸರು ಇತ್ಯಾದಿಗಳನ್ನು ಆಡಳಿತಾತ್ಮಕವಾಗಿ ಹಾಗೂ ಶಾಸನಾತ್ಮಕವಾಗಿ ಬಳಸುವಲ್ಲಿ ಏಕರೂಪತೆಯನ್ನು ತರಲು ಕೆಲವು ಸೂಚನೆಗಳನ್ನು ನೀಡುವುದು ಅಗತ್ಯವೆಂದು ಕಂಡುಬರುತ್ತದೆ.

ಇಲಾಖೆಯ ಕೆಲವು ಅಧಿಕಾರಿಗಳು ತಮ್ಮ ಪದನಾಮದಲ್ಲಿ **'ವಾಣಿಜ್ಯ ತೆರಿಗೆ'** ಎಂಬುದರ ಬದಲಾಗಿ **'ರಾಜ್ಯ ತೆರಿಗೆ'** ಎಂದು ಬಳಸುತ್ತಿರುವುದು ಕಂಡು ಬಂದಿರುತ್ತದೆ. ರಾಜ್ಯದಲ್ಲಿ ಸರಕು ಮತ್ತು ಸೇವಾ ತೆರಿಗೆಯು ಅನುಷ್ಠಾನಗೊಂಡಾಗ, ಕೆಲವು ಕಛೇರಿಗಳ ಪದನಾಮಗಳನ್ನು ಮಾತ್ರ ಮರುನಾಮಕರಣಗೊಳಿಸಲಾಗಿದ್ದು, ಅದರಂತೆ **'ವಿಭಾಗೀಯ ಮೌಲ್ಯವರ್ಧಿತ ತೆರಿಗೆ ಕಛೇರಿ'** ಎಂಬುದನ್ನು **'ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ'** ಎಂದೂ, **'ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಕಛೇರಿ'** ಎಂಬುದನ್ನು **'ಸ್ಥಳೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ'** ಎಂದೂ ಉಲ್ಲೇಖಿತ ಆದೇಶದಂತೆ ಮರುನಾಮಕರಣಗೊಳಿಸಲಾಗಿದೆ. ಆದರೆ ಕೆಲವು ಅಧಿಕಾರಿಗಳು ತಮ್ಮ ಪದನಾಮವನ್ನು **'ರಾಜ್ಯ ತೆರಿಗೆ ಸಹಾಯಕ ಆಯುಕ್ತರು'** ಎಂದೂ, ಕಛೇರಿ ಹೆಸರನ್ನು **'ರಾಜ್ಯ ತೆರಿಗೆ ಸಹಾಯಕ ಆಯುಕ್ತರ ಕಛೇರಿ'** ಎಂದೂ ಬಳಸುತ್ತಿರುವುದು ಹಾಗೂ ಇದೇ ರೀತಿಯ ಮೊಹರುಗಳನ್ನು ಬಳಸುತ್ತಿರುವುದನ್ನು ಗಮನಿಸಲಾಗಿದೆ. ಮೇಲೆ ತಿಳಿಸಿರುವಂತೆ ಕೆಲವು ಕಛೇರಿಗಳ ಹೆಸರುಗಳನ್ನು ಮಾತ್ರ ಮರುನಾಮಕರಣಗೊಳಿಸಲಾಗಿದ್ದು, ಅಧಿಕಾರಿಗಳ ಪದನಾಮಗಳನ್ನು ಮರುನಾಮಕರಣಗೊಳಿಸಿರುವುದಿಲ್ಲ.

..................2

ಆದುದರಿಂದ ಇಲಾಖೆಯ ಆಡಳಿತಕ್ಕೆ ಸಂಬಂಧಿಸಿದಂತೆ ಪದನಾಮಗಳನ್ನು, ಕಛೇರಿ ಹೆಸರುಗಳನ್ನು ಬಳಸುವಾಗ ಜಾಗರೂಕತೆ ವಹಿಸಿ, ಇಂತಹ ತಪ್ಪುಗಳಿಗೆ ಅವಕಾಶ ನೀಡದೇ, ಅಧಿಸೂಚಿಸಲ್ಪಟ್ಟಂತೆಯೇ ಸರಿಯಾಗಿ ಬಳಸಲು ಎಲ್ಲಾ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಮುಂದುವರೆದು, ಕೆಲವು ಅಧಿಕಾರಿಗಳು ತಪ್ಪಾದ ಪದನಾಮ ಹಾಗೂ ಕಛೇರಿಯ ಹೆಸರುಗಳನ್ನುಳ್ಳ ಮೊಹರುಗಳನ್ನು ಕಛೇರಿ ಕಾರ್ಯಗಳಿಗೆ ಅಧಿಕೃತವಾಗಿ ಬಳಸುತ್ತಿರುವುದನ್ನು ಗಮನಿಸಲಾಗಿದೆ. ಪದನಾಮಗಳನ್ನು ಹಾಗೂ ಮೊಹರುಗಳನ್ನು ಬಳಸುವಾಗ ಜಾಗ್ರತೆ ವಹಿಸುವ ಅಗತ್ಯತೆ ಇದ್ದು, ಇವುಗಳ ಬಳಕೆಯಲ್ಲಿ ಏಕರೂಪತೆ ಇರುವುದು ಅತ್ಯವಶ್ಯಕವಾಗಿರುತ್ತದೆ. ಆದುದರಿಂದ ಎಲ್ಲಾ ಅಧಿಕಾರಿಗಳೂ ತಾವು ಕಾರ್ಯನಿರ್ವಹಿಸುತ್ತಿರುವ ಹುದ್ದೆಯ ಅಧಿಕೃತ ಪದನಾಮದಂತೆ ಮಾತ್ರ ಮೊಹರುಗಳನ್ನು ಉಪಯೋಗಿಸಲು ಸೂಚಿಸಲಾಗಿದೆ.

ಮೇಲ್ಕಂಡ ಸೂಚನೆಗಳನ್ನು ಇಲಾಖೆಯ ಎಲ್ಲಾ ಅಧಿಕಾರಿಗಳೂ ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು ಹಾಗೂ ಈಗಾಗಲೇ ಅಧಿಕೃತವಲ್ಲದ ರೀತಿಯ ಪದನಾಮಗಳನ್ನು ಬಳಸುತ್ತಿರುವ ಹಾಗೂ ಮೊಹರುಗಳನ್ನು ಉಪಯೋಗಿಸುತ್ತಿರುವ ಅಧಿಕಾರಿಗಳು ಕೂಡಲೇ ಇವುಗಳನ್ನು ಸರಿಪಡಿಸಿಕೊಳ್ಳುವುದು. ಇಲಾಖೆಯ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳು/ ಶಾಖಾ ಮುಖ್ಯಸ್ಥರುಗಳು ಈ ಬಗ್ಗೆ ವೈಯಕ್ತಿಕ ಗಮನಹರಿಸುವುದು. ತಪ್ಪಿದಲ್ಲಿ, ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಲಾಗುವುದು.

(ಎಂ.ಎಸ್.ಶ್ರೀಕರ್)
ವಾಣಿಜ್ಯ ತೆರಿಗೆಗಳ ಆಯುಕ್ತರು
ಕರ್ನಾಟಕ, ಬೆಂಗಳೂರು

ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ) ಬೆಂಗಳೂರು

ಇವರಿಗೆ,

ಇಲಾಖೆಯ ಎಲ್ಲಾ ಅಧಿಕಾರಿಗಳು.